ತಡ ಆಗಿದ್ದು ನಿಜ. ಆದರೆ ಈಗ ಎಲ್ಲವೂ ಬಗೆಹರಿದಿದೆ. ಎಸ್.ಕೆ. ಆಲೂರ, ಬಾಂದಾರದು ಇನ್ನು ಎರಡು ಮೂರು ದಿವಸದಲ್ಲಿ ಟೆಂಡರ್ ಕರೆಯುತ್ತಿದ್ದೇವೆ. ಮತ್ತೆ ಇನ್ನೂ ಎರಡು ಬಾಂದಾರದ್ದು ಮುಂದಿನ 15 ದಿವಸಗಳಲ್ಲಿ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ : ಮಾನ್ಯ ಸಚಿವರಿಗೆ ಧನ್ಯವಾದಗಳು.

ಅಧ್ಯಕ್ಷರು : ಮಾನ್ಯ ಎ. ಮಂಜು ಅವರ ಪ್ರಶ್ನೆಗೆ ಸಮಯ ಕೋರಿದ್ದಾರೆ. 29ನೇ ತಾರೀಖಿನಂದು ಇಟ್ಟುಕೊಂಡಿದ್ದೇವೆ.

ಶ್ರೀ ಎ.ಮಂಜು : ಮಾನ್ಯ ಅಧ್ಯಕ್ಷರೆ, ಸುಮಾರು ಸಲ ನನಗೆ ಈ ರೀತಿ ಆಗಿದೆ. ಉತ್ತರ ಬರುತ್ತಲೇ ಇಲ್ಲ. ಈ ರೀತಿ ಆದರೆ ನಾವ್ಯಾಕೆ ಸದನಕ್ಕೆ ಬರಬೇಕು?

ಶ್ರೀ ಬಸವರಾಜ ಬೊಮ್ಮಾಯಿ : 29ಕ್ಕೆ ಉತ್ತರ ಕೊಡುತ್ತೇನೆ.

ವಿಷಯ: ಕಾಂಚೀಪುರ ಹಾಗೂ ಸುತ್ತಮುತ್ತ ವ್ಯಾಪ್ತಿಯಲ್ಲಿನ ಕೃಷಿ ತೆಂಗಿನ ತೋಟ

3 (23) ಶ್ರೀ ಗೂಳಿಹಟ್ಟಿ ಡಿ. ಶೇಖರ (ಹೊಸದುರ್ಗ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕಿನ ಕಾಂಚಿಪುರ ಮತ್ತು ಸುತ್ತಮುತ್ತಲಿನ ಹಳ್ಳಿಗಳ ವ್ಯಾಪ್ತಿಯಲ್ಲಿನ ಕೃಷಿ, ತೆಂಗಿನ ತೋಟಗಳಿರುವ ಜಮೀನುಗಳನ್ನು ಅರಣ್ಯ ಇಲಾಖೆಯಿಂದ ಪದೆ ಪದೇ ತೆರವುಗೊಳಿಸಲು ನೋಟೀಸ್‌ಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ರೈತರ ಕೃಷಿ ಜಮೀನು, ತೋಟ, ಅರಣ್ಯ ಇಲ್ಲದೇ ಇದ್ದರು ರೈತರಿಗೆ ಅರಣ್ಯ ಇಲಾಖೆಯಿಂದ ಆಗುತ್ತಿರುವ ತೊಂದರೆ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮ ಏನು;

ಇ) ಹೊಸದುರ್ಗ ತಾಲ್ಲೂಕಿನ ಹೊನ್ನೇನಹಳ್ಳಿ ಮತ್ತು ಗಾಳರಂಗಯ್ಯನಹಟ್ಟಿ ಗ್ರಾಮಗಳಲ್ಲಿ ರೈತರು ಅನೇಕ ವರ್ಷಗಳಿಂದ ಕೃಷಿ, ತೆಂಗಿನ ತೋಟಗಳಿಂದ ತುಂಬಿರುವ ಬಡ ರೈತರಿಗೆ ಅರಣ್ಯ ಇಲಾಖೆಯಿಂದ ಆಗುತ್ತಿರುವ ಕಿರುಕುಳದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ರೈತರ ಸಹಾಯಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು (ವಿವರ ಒದಗಿಸುವುದು)

ಶ್ರೀ ಸಿ.ಪಿ. ಯೋಗೇಶ್ವರ (ಅರಣ್ಯ ಸಚಿವರು) :

ಅ) ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕಿನ ಕಂಚಿಪುರ ಗ್ರಾಮದ ಹತ್ತಿರ ಗೊಲ್ಲರಹಟ್ಟಿ ಸರ್ವೆ ನಂ.1, 2 ಮತ್ತು 3 ಹಾಗೂ ನಾಗಯ್ಯನಕಟ್ಟೆ ಸರ್ವೆ ನಂ.27ರ ಮತ್ತು ಮುಗಿಲೋಡು ಸರ್ವೆ ನಂ.2, 4, 5, 13 ಮತ್ತು 22ರ ಪ್ರದೇಶವು ಕುದುರೆಕಣಿವೆ ಕಾಯ್ದಿಟ್ಟ ಅರಣ್ಯ ಪ್ರದೇಶಕ್ಕೆ ಸೇರಿರುತ್ತದೆ. ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಅಕ್ರಮ ಸಾಗುವಳಿ ಮಾಡಿದ/ ಪ್ರಯತ್ನಿಸಿದ ಪ್ರಕರಣಗಳಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಹಿರಿಯೂರು ಉಪ ವಿಭಾಗ, ಹಿರಿಯೂರು ಇವರು ಕರ್ನಾಟಕ ಅರಣ್ಯ ಕಾಯ್ದೆ 1963ರ ಸೆಕ್ಷನ್-64(ಎ)ರಡಿಯಲ್ಲಿ ಕ್ರಮ ಕೈಗೊಳ್ಳಲು ಸಂಬಂಧಿಸಿದ ಅತಿಕ್ರಮಣದಾರರಿಗೆ ನಿಯಮಾನುಸಾರ ನೋಟೀಸ್ ನೀಡಿರುತ್ತಾರೆ.

ಆ) ಮೈಸೂರು ಸರ್ಕಾರದ ಅಧಿಸೂಚನೆ ಸಂಖ್ಯೆ.ಆರ್-775-ಎಫ್ ಟಿ-162-14-5 ದಿನಾಂಕ: 15-7-1915 ರನ್ವಯ ಚಿತ್ರದುರ್ಗ ಜಿಲ್ಲೆ, ಹೊಸದುರ್ಗ ತಾಲ್ಲೂಕು, ಗೊಲ್ಲರಹಟ್ಟಿ ಸರ್ವೆ ನಂ.1, 2 ಮತ್ತು 3 ಹಾಗೂ ನಾಗನಾಯ್ಕನಕಟ್ಟೆ ಸರ್ವೆ ನಂ.27ರ ಮತ್ತು ಮುಗಿಲೋಡು ಸರ್ವೆ ನಂ.3, 4, 5, 9, 13 ಮತ್ತು 22ರ ಪ್ರದೇಶವು ಕುದುರೆಕಣಿವೆ ಕಾಯ್ದಿಟ್ಟ ಅರಣ್ಯ ಪ್ರದೇಶಕ್ಕೆ ಸೇರಿರುತ್ತದೆ. ಅಧಿಸೂಚನೆಯನ್ವಯ ವಿವರ ಕೆಳಗಿನಂತಿದೆ.

ಗ್ರಾಮ	ಸರ್ವೆ ನಂ.	ಅರಣ್ಯ ಪ್ರದೇಶಕ್ಕೆ ಸೇರಿದ ಜಮೀನಿನ ವಿಸ್ತೀರ್ಣ (ಎ-ಗು)
ಗೊಲ್ಲರಹಟ್ಟಿ	1	38.00
	2	68.00
	3	36.0
ನಾಗನಾಯ್ಕನಕಟ್ಟೆ	27	524.35
ಮುಗಿಲೋಡು	3	45.00
	4	25.00
	5	7.00
	9	14.00
	13	74.20
	22	17.03

ಅರಣ್ಯದ ಗಡಿಯ ಒಳಗೆ ಅಕ್ರಮ ಸಾಗುವಳಿ ಮಾಡಿದ/ಪ್ರಯತ್ನಿಸಿದ ಪ್ರಕರಣಗಳಲ್ಲಿ ಮಾತ್ರ ಅರಣ್ಯ ಇಲಾಖೆಯಿಂದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿದೆ. ಅರಣ್ಯ ಜಮೀನನ್ನು ಹೊರತುಪಡಿಸಿ ಅರಣ್ಯದ ಗಡಿಯಿಂದ ಹೊರಗೆ ಇರುವ ಕೃಷಿ, ತೋಟ, ಮುಂತಾದ ರೈತರ ಜಮೀನುಗಳಿಗೆ ಅರಣ್ಯ ಇಲಾಖೆಯಿಂದ ಯಾವುದೇ ತೊಂದರೆ ನೀಡಿರುವುದಿಲ್ಲ.

ಇ) ಕೃಷಿ, ತೋಟ ಮುಂತಾದ ರೈತರ ಜಮೀನುಗಳಿಗೆ ಅರಣ್ಯ ಇಲಾಖೆಯಿಂದ ಯಾವುದೇ ತೊಂದರೆ ನೀಡಿರುವುದಿಲ್ಲ.

ಶ್ರೀ ಗೂಳಿಹಟ್ಟಿ ಡಿ. ಶೇಖರ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಏನೋ ಮಾನ್ಯ ಸಚಿವರು ಕೊಟ್ಟಿದ್ದಾರೆ. ಆದರೆ ನನ್ನ ಕ್ಷೇತ್ರದ ಸುಮಾರು 3–4 ಹಳ್ಳಿಗಳಲ್ಲಿ ಬಹಳಷ್ಟು ಕೃಷಿ ಭೂಮಿ, ತೋಟಗಳು ಇರತಕ್ಕಂತಹ ಜಾಗಗಳು ಇವೆ. ನಾನು ಬೇಕಾದರೆ ಫೋಟೋಗಳ ಸಮೇತ ವಿವರವನ್ನು ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತೇನೆ. ಪೂರ್ತಿ ತೋಟಗಳು ಇರತಕ್ಕಂತಹವು, ಈಗಾಗಲೇ ಸುಮಾರು 60–70 ವರ್ಷ, 100 ವರ್ಷದಿಂದ ತೋಟಗಳು ಇರತಕ್ಕಂತಹ ಜಮೀನುಗಳಿಗೆ Forest ನವರು ನೋಟೀಸ್ ಕೊಟ್ಟು ಪದೇ ಪದೇ ಅವರಿಗೆ ಕಿರುಕುಳ ಕೊಡುತ್ತಿದ್ದಾರೆ. ಯಾವುದೋ ಒಂದು ನೆಪ ಒಡ್ಡಿ ಅವರುಗಳಿಗೆ ನೋಟಿಸ್‌ಗಳನ್ನು ಕೊಡುವುದು, ಅವರುಗಳನ್ನು ಕರೆಸಿಕೊಳ್ಳುವುದು. ಇದರಿಂದ ಸುಮಾರು ರೈತರು ಆತ್ಮಹತ್ಯೆ ಕೂಡ ಮಾಡಿಕೊಂಡಿದ್ದಾರೆ. ಏಕೆಂದರೆ ಅಷ್ಟು ದೊಡ್ಡ ದೊಡ್ಡ ತೆಂಗಿನ ಮರಗಳು ಹೋಗುತ್ತಿವೆ. ಅವರು ಗಡಿಗಳನ್ನು ಸರಿಯಾಗಿ ಗುರುತು ಮಾಡಿ ಕೊಂಡಿಲ್ಲ. ಇದರಿಂದ ಬಹಳಷ್ಟು ರೈತರಿಗೆ ತೊಂದರೆ ಆಗುತ್ತಿದೆ. ದಯಮಾಡಿ ಇದರ ಬಗ್ಗೆ ಒಂದು ಶಾಶ್ವತವಾದ ಪರಿಹಾರವನ್ನು ಕೊಡಬೇಕೆಂದು ಹೇಳಿ ತಮ್ಮ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಸಿ.ಪಿ. ಯೋಗೇಶ್ವರ (ಅರಣ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಒಂದು ಗಂಭೀರ ಸಮಸ್ಯೆ ಬಗ್ಗೆ ಅರಣ್ಯ ಇಲಾಖೆ ಸಾಕಷ್ಟು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಅದರಲ್ಲೂ ಬಹಳ ಮುಖ್ಯವಾಗಿ ಏನು ಗೋದಾವರಂ ತಿರುಮಲ ಪ್ರಾಡಕ್ಟ್ ಪ್ರಕರಣದಲ್ಲಿ 1996ರಲ್ಲಿ ಆಗಿರತಕ್ಕಂತಹ ತೀರ್ಪು ಮತ್ತು 2003ರ ನಿರ್ವಹಣೆ ಗೋಡೆಯಲ್ಲಿ ಆಗಿರತಕ್ಕಂತ ಸುಪ್ರೀಂ ಕೋರ್ಟಿನ ತೀರ್ಪಿನ ನಿಯಮದಂತೆ ಈಗಾಗಲೇ ಮಾನ್ಯ ಶಾಸಕರು ಎತ್ತಿರತಕ್ಕಂತಹ ಪ್ರಶ್ನೆ, ಹಿಂದೆ ಮೈಸೂರು ಸರ್ಕಾರದಲ್ಲಿ ಅದು ಅರಣ್ಯ

ಇಲಾಖೆ ಎಂದು ಘೋಷಣೆ ಆಗಿದೆ. ಆದರೂ ಕೂಡ ಇಂತಹ ಹಲವಾರು ಗಂಭೀರ ಸಮಸ್ಯೆಗಳು ರಾಜ್ಯದಲ್ಲಿದ್ದು ಇದರ ಬಗ್ಗೆ ವಿಸ್ತೃತವಾದ ಚರ್ಚೆ ಆಗಬೇಕಾಗಿದೆ. ಆ ನಿಟ್ಟಿನಲ್ಲಿ ಅರಣ್ಯ ಇಲಾಖೆಯು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಅಧ್ಯಕ್ಷರೆ, ನನ್ನ ಕ್ಷೇತ್ರವೂ ಸಹ ಇದರ ಪಕ್ಕದಲ್ಲಿದೆ. ಹಾಗಾಗಿ ಸಮಸ್ಯೆ ಬಂದಿದೆ. ಈ ಉತ್ತರವನ್ನು ಕೇಳಲು ಪ್ರಶ್ನೆ ರೈಸ್ ಮಾಡಲಿಲ್ಲ. ಗೊಂದಲ ಇದೆ, Supreme Court judgment ಎಲ್ಲರಿಗೂ ಗೊತ್ತಿರತಕ್ಕದ್ದೆ. ಪ್ರಶ್ನೆ ಏನು? ನೀವು ಉತ್ತರ ಏನು ಕೊಡುತ್ತೀರಿ? ಉತ್ತರ ಕೊಡಬೇಕಾದರೆ ಅರಣ್ಯದ ಗಡಿಯೊಳಗೆ ಅಕ್ರಮ ಸಾಗುವಳಿ ಮಾಡಿದ/ಪ್ರಯತ್ನಿಸಿದ ಪ್ರಕರಣಗಳಿಗೆ ಮಾತ್ರ ಅರಣ್ಯ ಇಲಾಖೆಯಿಂದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿದೆ, ಅರಣ್ಯ ಜಮೀನನ್ನು ಹೊರತು ಪಡಿಸಿ ಅರಣ್ಯದ ಗಡಿಯಿಂದ ಹೊರಗೆ ಇರುವ ಕೃಷಿ ಜಮೀನಿಗೆ ಕಷ್ಟ ಕೊಡುತ್ತಿಲ್ಲ ಎಂದು ಹೇಳುತ್ತಿದ್ದೀರಿ. ಪ್ರಶ್ನೆ ಬಂದಿರತಕ್ಕದ್ದು ಇದು ತಮಗೆ ವ್ಯಾಪಕವಾಗಿ ಗೊತ್ತಿರತಕ್ಕಂತಹದು. ದಯಮಾಡಿ Forest Conservation Act ಪ್ರಕಾರ ರಾಜ್ಯ ಸರ್ಕಾರಗಳಿಗೆ 1980ರ ಮುಂಚೆ ಎಲ್ಲೆಲ್ಲಿ ಅಕ್ರಮ ಸಾಗುವಳಿ ಮಾಡಿದ್ದರೋ ಅದನ್ನು ಸಕ್ರಮ ಮಾಡುವುದಕ್ಕೆ ಅವಕಾಶವಿತ್ತು. ಪ್ರಸ್ತಾವಿತ ಸರ್ವೆ ನಂಬರ್‌ಗಳಲ್ಲಿ ಕಳೆದ 100 ವರ್ಷಗಳಿಂದ ಸಾಗುವಳಿ ಮಾಡುತ್ತಿರತಕ್ಕದ್ದು ಇದೆ. ಆದರೆ ಇದುವರೆಗೂ ಕೇಂದ್ರ ಸರ್ಕಾರದ ಮುಂದೆ ಪ್ರಸ್ತಾವನೆ ತರಲಿಲ್ಲವೆಂದರೆ ಅದು ಯಾರ ತಪ್ಪು? ರೈತರ ತಪ್ಪಾ? ಇವತ್ತು ತೆಂಗಿನ ಗಿಡ ಫಸಲು ಬಿಡುತ್ತಿದೆ. ಗೂಳಿಹಟ್ಟಿ ಶೇಖರ್ ಅವರಿಂದ ಫೋಟೋ ತರಿಸಿ ನೋಡಬೇಕು. ತೆಂಗು ಫಸಲು ಬಿಡುತ್ತಿದೆ. 50–60 ವರ್ಷಗಳಿಂದ ಫಸಲು ಬಿಡುತ್ತಿರುವ ತೋಟಗಳಲ್ಲಿ ಇವತ್ತು ಒಕ್ಕಲೆಬ್ಬಿಸುವುದಕ್ಕೆ ಹೊರಟರೆ ಹೇಗೆ? Supreme Court judgment ಇದೆ ರಾಜ್ಯ ಸರ್ಕಾರ ಏನು ಮಾಡಿದ್ದೀರಿ? ಹಲವಾರು ಸಮಸ್ಯೆಗಳಿವೆ. ಇದರ ಬಗ್ಗೆ ದಯಮಾಡಿ ಯೋಚನೆ ಮಾಡಿ. ಯಾವಾಗ ಕ್ರಮ ತೆಗೆದುಕೊಳ್ಳುತ್ತೀರಿ? ಮಾನ್ಯ ಅರಣ್ಯ ಸಚಿವರು ಅಧಿಕಾರಿ ಗಳೊಂದಿಗೆ ಸಭೆ ನಡೆಸಿ ಕಷ್ಟ ಆಗಿರತಕ್ಕಂತಹ ಕ್ಷೇತ್ರದ ಸದಸ್ಯರನ್ನು ಕರೆದು, ಸಭೆಯಲ್ಲಿ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರಲಿ. ಅದು ಬಿಟ್ಟು ಈ ರೀತಿಯಾದ ಉತ್ತರವನ್ನು ಕೊಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ : ಹೊಸದುರ್ಗ ತಾಲ್ಲೂಕಿನ ಹೊನ್ನೇನಹಳ್ಳಿ ಮತ್ತು ಗಾಳ ರಂಗಯ್ಯನಹಟ್ಟಿಯಲ್ಲಿ ಬಹಳಷ್ಟು ರೈತರು ತೊಂದರೆಯಲ್ಲಿದ್ದಾರೆ. ಅದರಲ್ಲೂ ಬಹಳಷ್ಟು ಬಡ ರೈತರು ತಮ್ಮ ತೋಟಗಳಲ್ಲಿ ತೆಂಗಿನ ಫಸಲನ್ನು ಹೊಂದಿದ್ದಾರೆ. ಅಲ್ಲಿ ಫಾರೆಸ್ಟ್‌ನವರು ಬಂದು ಇಲ್ಲಿ ನೀವು ಸಾಗುವಳಿ ಮಾಡಬಾರದೆಂದು ತೊಂದರೆ ಕೊಡುತ್ತಿದ್ದಾರೆ. ಜೊತೆಗೆ ಅಲ್ಲೆಲ್ಲಾ ಕೆಲವು ಸರ್ವೆ ನಂಬರ್‌ಗಳಿಗೆ ಪಟ್ಟಾ ಮತ್ತು ಕಂದಾಯ ದಾಖಲೆಗಳನ್ನು ಕೊಟ್ಟಿದ್ದಾರೆ. ಕೆಲವರಿಗೆ ಒಕ್ಕಲೆಬ್ಬಿಸುವುದು ಮತ್ತು ಕೆಲವರಿಗೆ ಬಿಡುವಂತಹ ಕೆಲಸ ಆಗಿದೆ. ಅಲ್ಲೂ ಕೂಡ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನ ಇರತಕ್ಕಂತಹ ಸ್ಥಳ. ಎಸಿಎಫ್ ನವರು ಬರುತ್ತಾರೆ. ಇದು ಏನೂ ಆಗುವುದಿಲ್ಲ, Supreme Court direction ಇದೆ, ಅದಿದೆ, ಇದಿದೆ, ನಮಗೇನೂ ಮಾಡುವುದಕ್ಕೆ ಆಗುವುದಿಲ್ಲ. ನೀವು ನೋಟಿಸ್ ಗಳನ್ನು ತೆಗೆದುಕೊಳ್ಳುತ್ತಿರಬೇಕು ಎಂದು ಹೇಳಿ ರೈತರಿಗೆ ತೊಂದರೆ ಕೊಡುತ್ತಿರುವುದು ಇದೆ. ದಯಮಾಡಿ ಇದರ ಬಗ್ಗೆ ಬರೇ ಹಾರಿಕೆ ಉತ್ತರ ಕೊಡುವುದು ಅಥವಾ ನಮ್ಮ ಕೈಯಲ್ಲಿ ಆಗುವುದಿಲ್ಲ ಎನ್ನುವ ಬದಲು ಒಂದು ತೀವ್ರವಾದ ಕ್ರಮವನ್ನು ತೆಗೆದುಕೊಂಡು ಬಡ ರೈತರನ್ನು ಉಳಿಸಬೇಕೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ.

ಶ್ರೀ ಸಿ.ಪಿ. ಯೋಗೇಶ್ವರ : ವಿರೋಧ ಪಕ್ಷ ಉಪ ನಾಯಕರು ಮತ್ತು ಶಾಸಕರ ಸಭೆ ಕರೆದು ಈ ಸಮಸ್ಯೆಯನ್ನು ಬಗೆಹರಿಸುತ್ತೇನೆ.

ಅಧ್ಯಕ್ಷರು : Forest ಎಂದು declare ಮಾಡಿದ ಮೇಲೆ ಕೆಲವು formalities ಇದೆ. ನೀವು ಯಾವುದನ್ನೂ ನೋಡುವುದಿಲ್ಲ. ಮಾನ್ಯ ಯೋಗೇಶ್ ಅವರೇ ಕೇಳಿ. ಯಾವುದೇ ಲ್ಯಾಂಡನ್ನು ಫಾರೆಸ್ಟ್ ಎಂದು ಡಿಕ್ಲೇರ್ ಮಾಡಬೇಕಾದರೆ under the Forest Mannual ಸ್ವಲ್ಪ Rules ನಲ್ಲಿದೆ. ನೀವು ನೋಡಿ. ಅಧಿಕಾರಿಗಳು ಹೇಳಿದ ಹಾಗೆ ಇಲ್ಲಿ ಉತ್ತರ ಕೊಡಬೇಡಿ. ಎಲ್ಲಾ ಕಡೆ ಸಮಸ್ಯೆ ಇದೆ, ಅವರನ್ನು ಕರೆದು ಸಭೆ ಮಾಡಿ.

ಅಧ್ಯಕ್ಷರು : ಮಾನ್ಯ ನಾಡಗೌಡ ಅವರೇ ನಿಮ್ಮ ಪ್ರಶ್ನೆ 4(35) ವರ್ಗಾವಣೆ ಆಗಿದೆ. ಮಾನ್ಯ ಕೃಷಿ ಸಚಿವರು 30ಕ್ಕೆ ಉತ್ತರ ಕೊಡಲಿ.

ಶ್ರೀ ನಾಡಗೌಡ ವೆಂಕಟರಾವ್ : 30 ರಂದು ಕಡೆಯ ದಿವಸ, ಮತ್ತೆ ಹಾಗೇ ಹೋಗಬಾರದು.